(ಗೊಂದಲ)

ಉಪಾಧ್ಯಕ್ಷರು – MLA ನೇ ಮಾಡಬೇಕು ಅಂತ ಇದೆ

ಶ್ರೀ ಜೆ ಸಿ ಮಾಧುಸ್ವಾಮಿ – ನೋಡಿ ಆದೇಶ ಇಲ್ಲೇ ಇದೆ ನಮ್ಮ Hand book, page 469 ರಲ್ಲಿ, ವಿಧಾನಪರಿಷತ್ತಿನ ಸದಸ್ಯರಲ್ಲಿ ಕೆಲವರು ಪದವೀಧರ ಕ್ಷೇತ್ರ, ಶಿಕ್ಷಕರ ಕ್ಷೇತ್ರ, local authorities ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ಆಯ್ಕೆ ಆಗಿದ್ದು ಅವರ ಚುನಾವಣಾ ಕ್ಷೇತ್ರ ನಿರ್ದಿಷ್ಟವಾಗಿರದ ಕಾರಣ ಸ್ಥಳೀಯ ಶಾಸಕರೆಂದು ಗುರುತಿಸಲು ಅವರ ಮತಕ್ಷೇತ್ರದಲ್ಲಿ ಬರುವ ಅವರಿಷ್ಟಪಡುವ ಯಾವುದಾದರೂ ಒಂದು ತಾಲ್ಲೂಕನ್ನು nodal ತಾಲ್ಲೂಕೆಂದು ಮತ್ತು ನಾಮನಿರ್ದೇಶನ ಹೊಂದಿದ ವಿಧಾನಪರಿಷತ್ ಸದಸ್ಯರು ಹಾಗೂ ವಿಧಾನಸಭೆಯಿಂದ ಆಯ್ಕೆಗೊಂಡ ವಿಧಾನಪರಿಷತ್ ಸದಸ್ಯರು ಅವರಿಷ್ಟಪಡುವ ತಾಲ್ಲೂಕನ್ನು ನೋಡಲ್ ತಾಲ್ಲೂಕೆಂದು ಪರಿಗಣಿಸಿ ಅವರನ್ನು ಸರ್ಕಾರದ ಅಧಿಕೃತ ಸಮಾರಂಭಕ್ಕೆ ಆದ್ಯತೆ ಮೇಲೆ ಆಹ್ವಾನಿಸಲು ಅವರ ಹೆಸರನ್ನು ಆಹ್ವಾನಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ಕೈಗೊಳ್ಳಬೇಕು This is rule, ಇನ್ನೇನು ಚರ್ಚೆ ಮಾಡುವುದಿದೆ? 468ನೇ ಪುಟದಲ್ಲಿ ಕರ್ನಾಟಕ ಸರ್ಕಾರದ ನಡವಳಿಕೆಗಳು ಅಂತ ಬಂದು ಇ ಸಬ್ ಸೆಕ್ಷನ್‌ನಲ್ಲಿ ಅಡಿಶನಲ್ ಪ್ಯಾರದಲ್ಲಿ ರೂಲ್ ಕ್ಲಿಯರಾಗಿದೆ

ಉಪಾಧ್ಯಕ್ಷರು – ನೀವಿಷ್ಟಪಟ್ಟರೆ 5ನೇ ತಾರೀಖಿನವರೆಗೆ ಈ ಸದನ ನಡೆಯುತ್ತದೆ ಶಿಷ್ಟಾಚಾರದ ಬಗ್ಗೇನೆ ಚರ್ಚೆಯಾಗಬೇಕೆಂದರೆ ಒಂದು ಗಂಟೆ ಚರ್ಚೆ ಇಟ್ಟುಕೊಳ್ಳೋಣ

ಶ್ರೀ ಬಸವರಾಜ ಹೊರಟ್ಟಿ – ಆಯಿತು ಈಗ ತಪ್ಪಾಗಿದ್ದರೆ ಸರಿಪಡಿಸುತ್ತೇನೆ ಅಂತ ಹೇಳಿದ್ದೀನಲ್ಲ

ಸರ್ಕಾರಿ ಪ್ರಥಮ ದರ್ಜೆ ಕಾಲೇಜ್

299 (2094) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊರತೆಯಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ ಡಾ॥ ಡಿ ಎಂ ನಂಜುಂಡಪ್ಪನವರ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕಿನಿಂದ ಬಾಗೇಪಲ್ಲಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮಕೈಗೊಂಡಿದೆ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಪರಿಶೀಲಿಸಲಾಗುತ್ತಿದೆ

ಇ) ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ

ಮೂಲ ಪ್ರಶ್ನಕರ ಬದಲಿಗೆ ಶ್ರೀ ಜೆ ಸಿ ಮಾಧುಸ್ವಾಮಿ – ಅಧ್ಯಕ್ಷರೇ, ಬಾಗೇಪಲ್ಲಿಯಲ್ಲಿ ಒಂದು ಕಾಲೇಜಿದ್ದು ಅಲ್ಲಿ ಬಹಳ strength ಜಾಸ್ತಿಯಾಗಿದ್ದು ಇನ್ನೊಂದು ಪ್ರಥಮ ದರ್ಜೆ ಕಾಲೇಜು ಅಗತ್ಯವಿದೆಯಾ ಅಂದಿದ್ದಕ್ಕೆ ಸಚಿವರು yes ಅಂದಿದ್ದಾರೆ ಈ ಶೈಕ್ಷಣಿಕ ವರ್ಷದಲ್ಲೇನಾದರೂ ಮಂಜೂರು ಮಾಡುತ್ತೀರ ಅಂತ ಕೇಳುತ್ತೇನೆ

ಶ್ರೀ ಬಸವರಾಜ ಹೊರಟ್ಟಿ – ಅಧ್ಯಕ್ಷರೇ ಪರಿಶೀಲಿಸಲಾಗುವುದು

ಶ್ರೀ ಜೆ ಸಿ ಮಾಧುಸ್ವಾಮಿ – ಪರಿಶೀಲಿಸಲಾಗುವುದು ಅಂದರೆ ಏನನ್ನು? ನಂಜುಂಡಪ್ಪ ವರದಿ ಪ್ರಕಾರವಿದ್ದರೆ ಕೊಡುತ್ತೇವೆ ಅಂತ ಈಗ ತಾನೇ ಉತ್ತರಿಸಿದ್ದೀರಿ ಇದಕ್ಕೂ ಹಾಗೇ ಹೇಳಿ ಬಾಗೇಪಲ್ಲಿನೂ ನಂಜುಂಡಪ್ಪ ವರದಿ ಪ್ರಕಾರ ಅತಿ ಹಿಂದುಳಿದ ತಾಲ್ಲೂಕು, ಆದ್ದರಿಂದ ಆದ್ಯತೆ ಮೇಲೆ ಕೊಡುತ್ತೇವೆ ಅಂತ ಹೇಳಬೇಕಲ್ಲ

ಶ್ರೀ ಬಸವರಾಜ ಹೊರಟ್ಟಿ – ಪ್ರತಿ ತಾಲ್ಲೂಕಿಗೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಡಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ ಆ

ದಿಶೆಯಲ್ಲಿ ಅಲ್ಲಿ ಸಹಿತ ಸರ್ಕಾರಿ ಕಾಲೇಜು ಅವಶ್ಯಕತೆಯಿದೆ ಅಂತ ಅನ್ನಿಸಿದರೆ ಪರಿಶೀಲಿಸಿ ಸರ್ಕಾರ ಸರ್ಕಾರಿ ಕಾಲೇಜು ಮಂಜೂರು ಮಾಡಲು ಕ್ರಮ ಕೈಗೊಳ್ಳುತ್ತದೆ

ಉಪಾಧ್ಯಕ್ಷರು – ಮುಂದಿನ ಪ್ರಶ್ನೆ ಶ್ರೀಮತಿ ಶಕುಂತಲಾಶೆಟ್ಟಿ – ಗೈರುಹಾಜರು

3 (ಆ) ತಡೆಹಿಡಿಯಲಾದ ಪ್ರಶ್ನೆ

ನವಗ್ರಾಮ ಯೋಜನೆ

256 (1330) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಗ್ರಾಮ ಯೋಜನೆ ಜಾರಿಯಲ್ಲಿದೆಯೇ, ಇಲ್ಲದಿದ್ದಲ್ಲಿ ಅದನ್ನು ನಿಲ್ಲಿಸಲು ಕಾರಣಗಳೇನು,

ಆ) ನವಗ್ರಾಮ ಯೋಜನೆಯಲ್ಲಿ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಹಣ ಈಗಾಗಲೇ ಬಿಡುಗಡೆ ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ (ವಸತಿ ಸಚಿವರು)

ಅ) 2001–02, 2002–03 ಹಾಗೂ 2003–04ನೇ ಸಾಲಿನಲ್ಲಿ ನವಗ್ರಾಮ ಆಶ್ರಯ ಯೋಜನೆಯಡಿ ಮನೆಗಳ ಗುರಿಯನ್ನು ನೀಡಲಾಗಿರುತ್ತದೆ

2004–05ರಿಂದ ಈ ಯೋಜನೆಯಡಿ ಯಾವುದೇ ಗುರಿಯನ್ನು ನೀಡಲಾಗಿರುವುದಿಲ್ಲ ಆದರೆ ಗ್ರಾಮ ಪಂಚಾಯತ್ ಇಚ್ಛಿಸಿದಲ್ಲಿ ಗ್ರಾಮೀಣ ಆಶ್ರಯ ಮತ್ತು ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿ ಗ್ರಾಮ ಪಂಚಾಯತಿಗೆ ನೀಡಲಾದ ಗುರಿಯಲ್ಲಿ ಮನೆಗಳನ್ನು ನವಗ್ರಾಮ ಮಾದರಿ ರೂಪದಲ್ಲಿ ನಿರ್ಮಿಸಲು ಅವಕಾಶವಿರುತ್ತದೆ

ಆ) ನವಗ್ರಾಮ ಆಶ್ರಯ ಯೋಜನೆಯಡಿಯಲ್ಲಿ ಇಲ್ಲಿಯವರೆಗೂ ಶ್ರೇಣಿವಾರು, ತಾಲ್ಲೂಕುವಾರು, ಬಿಡುಗಡೆ ಮಾಡಲಾದ ಅನುದಾನದ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ (ಅನುಬಂಧ 11 ಪುಟಗಳು ಇರುವುದರಿಂದ ಸದಸ್ಯರಿಗೆ ಮಾತ್ರ ನೀಡಲಾಗಿದೆ)